CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

<u>ಎಸ್ .ಸಿ. ನಂಃ 48/2021</u>

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 04
ಸಿ.ಡಬ್ಲ್ಯೂ ನಂಃ 06
ಸಾಕ್ಷಿಯನ್ನು ದಿನಾಂಕಃ 15-11-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶರಣಪ್ಪ |
| ತಂದೆಯ ಹೆಸರು | ಃ | ಹನುಮಪ್ಪ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ಯಡ್ಡೋಣಿ |

<u>ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ</u>

ಈಗ ನನಗೆ ತೋರಿಸಿದ ನಿಪಿ 8 ಮತ್ತು 9 ಪಂಚನಾಮೆ ಮತ್ತು ಕಚ್ಚಾನಕ್ಷೆಯಲ್ಲಿ ನನ್ನ ಸಹಿಗಳು ಇವೆ. <u>ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ 8(ಬಿ) ಮತ್ತು ನಿಪಿ 9(ಬಿ) ಎಂದು</u> ಗುರುತಿಸಲಾಯಿತು. ಈಗ ನೋಡಿದ ನಿಪಿ 10 ರಿಂದ 12 ಫೋಟೋಗಳಲ್ಲಿ ನಾನು ಇದ್ದೇನೆ. ಆ ಫೋಟೋಗಳನ್ನು ಎಲ್ಲಿ ತೆಗೆಯಲಾಯಿತು ಎಂದು ಗೊತ್ತಿಲ್ಲ.

2). ಈಗ ನೋಡಿದ ನಿಪಿ 13 ಪಂಚನಾಮೆ ಹಾಗೂ ಅದಕ್ಕೆ ಸಂಬಂಧಪಟ್ಟ ನಿಪಿ 14 ಕಚ್ಚಾನಕ್ಷೆಯಲ್ಲಿಯೂ ಸಹಾ ನನ್ನ ಸಹಿಗಳಿವೆ. <u>ಸಾಕ್ಷಿದಾರರ ಸಹಿಗಳನ್ನು ನಿಪಿ 13(ಬಿ) ಮತ್ತು ನಿಪಿ 14(ಬಿ)</u> ಎಂದು ಗುರುತಿಸಲಾಯಿತು. ಈಗ ನೋಡಿದ ನಿಪಿ 15 ಮತ್ತು 16 ಫೋಟೋಗಳಲ್ಲಿ ನಾನು ಇದ್ದೇನೆ. ಆ ಫೋಟೋಗಳನ್ನು ಸಹಾ ಎಲ್ಲಿ ತೆಗೆಯಲಾಯಿತು ಎಂದು ಗೊತ್ತಿಲ್ಲ.

3). ಈ ಮೇಲೆ ಹೇಳಿದ ದಾಖಲೆಗಳಿಗೆ ಸುಮಾರು 2 ವರ್ಷಗಳ ಹಿಂದೆ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಾಗ ಬಜಾರ ಬಳಿ ಬಂದು ನನ್ನ ಸಹಿಗಳನ್ನು ಪಡೆದುಕೊಂಡರು. ಚಾಸಾ 7 ನನಗೆ ಪರಿಚಯವಿಲ್ಲ. ಈ ಮೇಲೆ ಹೇಳಿದ ಪಂಚನಾಮೆಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಸಹಿಗಳು ಮಾಡುವ ಮುನ್ನ ಅವುಗಳಲ್ಲಿ ಬರೆದಿರುವ ವಿಚಾರ ನನಗೆ ತಿಳಿಸಿಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

4). ದಿಃ 30-4-2021 ರಂದು ಮಧ್ಯಾಹ್ನ 12 ರಿಂದ 12-45 ಗಂಟೆಯ ಸಮಯದಲ್ಲಿ ಚಾಸಾ 7 ತೋರಿಸಿದ ಸ್ಥಳದಲ್ಲಿ ಪೊಲೀಸರು ಮಹಜರ ಮತ್ತು ಕಚ್ಛಾ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 1 ರಿಂದ 1-15 ಗಂಟೆಯವರೆಗೆ ಸುಮಿತ್ರವ್ವ ಮತ್ತು ಆಕೆಯ ಮಗು ವಿಷ ಸೇವನೆ ಮಾಡಿದ ಜಾಗದಲ್ಲಿ 2ನೇ ಪಂಚನಾಮೆ ಮತ್ತು ಕಚ್ಛಾ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಊರಿನವನು ಎಂಬ ಕಾರಣಕ್ಕಾಗಿ ಆತನಿಗೆ ಸಹಾಯ ಮಾಡಲು ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್ ವ್ಹೈ ಬಿ ವಕೀಲರಿಂದ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ 48/2021

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 03
ಸಿ.ಡಬ್ಲ್ಯೂ ನಂಃ 05
ಸಾಕ್ಷಿಯನ್ನು ದಿನಾಂಕಃ 15-11-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಕುಮಾರೆಪ್ಪ
ತಂದೆಯ ಹೆಸರು ಃ ಆದಪ್ಪ
ವಯಸ್ಸು ಃ 38 ವರ್ಷ
ಉದ್ಯೋಗ ಃ ಒಕ್ಕಲುತನ
ವಾಸ ಸ್ಥಳ ಃ ಯಡ್ಡೋಣಿ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನನಗೆ ತೋರಿಸಿದ ಪಂಚನಾಮೆ ಹಾಗೂ ಅದಕ್ಕೆ ಅಡಕವಾಗಿರುವ ಕಚ್ಚಾ ನಕ್ಷೆಯಲ್ಲಿ ನನ್ನ ಸಹಿಗಳಿವೆ. ಸದರಿ ಪಂಚನಾಮೆ ಹಾಗೂ ಅದಕ್ಕೆ ಸಂಬಂಧಪಟ್ಟ ಕಚ್ಚಾನಕ್ಷೆಯನ್ನು ಕ್ರಮವಾಗಿ ನಿಪಿ 8 ಮತ್ತು 9 ಎಂದು, ಸಾಕ್ಷಿದಾರರ ಸಹಿಗಳನ್ನು ನಿಪಿ 8(ಎ) ಮತ್ತು ನಿಪಿ 9(ಎ) ಎಂದು ಗುರುತಿಸಲಾಯಿತು. ಈಗ ನೋಡಿದ 3 ಫೋಟೋಗಳಲ್ಲಿ ನಾನು ಇದ್ದೇನೆ. ಫೋಟೋಗಳನ್ನು ನಿಪಿ 10 ರಿಂದ 12 ಎಂದು ಗುರುತಿಸಲಾಯಿತು. ಆ ಫೋಟೋಗಳನ್ನು ಎಲ್ಲಿ ತೆಗೆಯಲಾಯಿತು ಎಂದು ಗೊತ್ತಿಲ್ಲ.

2). ಈಗ ನೋಡಿದ ಮತ್ತೊಂದು ಪಂಚನಾಮೆ ಹಾಗೂ ಅದಕ್ಕೆ ಸಂಬಂಧಪಟ್ಟ ಕಚ್ಚಾನಕ್ಷೆಯಲ್ಲಿಯೂ ಸಹಾ ನನ್ನ ಸಹಿಗಳಿವೆ. ಸದರಿ ಪಂಚನಾಮೆ ಮತ್ತು ಅದಕ್ಕೆ ಸಂಬಂಧಪಟ್ಟ ಕಚ್ಚಾನಕ್ಷೆಯನ್ನು ಕ್ರಮವಾಗಿ ನಿಪಿ 13 ಮತ್ತು 14 ಎಂದು, ಸಾಕ್ಷಿದಾರರ ಸಹಿಗಳನ್ನು ನಿಪಿ 13(ಎ) ಮತ್ತು ನಿಪಿ 14(ಎ) ಎಂದು ಗುರುತಿಸಲಾಯಿತು. ಈಗ ನೋಡಿದ 2 ಫೋಟೋಗಳಲ್ಲಿ ನಾನು ಇದ್ದೇನೆ. ಫೋಟೋಗಳನ್ನು ನಿಪಿ 15 ರಿಂದ 16 ಎಂದು ಗುರುತಿಸಲಾಯಿತು. ಆ ಫೋಟೋಗಳನ್ನು ಸಹಾ ಎಲ್ಲಿ ತೆಗೆಯಲಾಯಿತು ಎಂದು ಗೊತ್ತಿಲ್ಲ.

3). ಈ ಮೇಲೆ ಹೇಳಿದ ದಾಖಲೆಗಳಿಗೆ ಸುಮಾರು 2 ವರ್ಷಗಳ ಹಿಂದೆ ಪೊಲೀಸರು ನಮ್ಮ ಗ್ರಾಮಕ್ಕೆ ಬಂದಾಗ ಬಜಾರ ಬಳಿ ಬಂದು ನನ್ನ ಸಹಿಗಳನ್ನು ಪಡೆದುಕೊಂಡರು. ಚಾಸಾ 7 ನನಗೆ ಪರಿಚಯವಿಲ್ಲ. ಈ ಮೇಲೆ ಹೇಳಿದ ಪಂಚನಾಮೆಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಸಹಿಗಳು ಮಾಡುವ

ಮುನ್ನ ಅವುಗಳಲ್ಲಿ ಬರೆದಿರುವ ವಿಚಾರ ನನಗೆ ತಿಳಿಸಿಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ</u>

4). ದಿಃ 30-4-2021 ರಂದು ಮಧ್ಯಾಹ್ನ 12 ರಿಂದ 12-45 ಗಂಟೆಯ ಸಮಯದಲ್ಲಿ ಚಾಸಾ 7 ತೋರಿಸಿದ ಸ್ಥಳದಲ್ಲಿ ಪೊಲೀಸರು ಮಹಜರ ಮತ್ತು ಕಚ್ಚಾ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 1 ರಿಂದ 1-15 ಗಂಟೆಯವರೆಗೆ ಸುಮಿತ್ರವ್ವ ಮತ್ತು ಆಕೆಯ ಮಗು ವಿಷ ಸೇವನೆ ಮಾಡಿದ ಜಾಗದಲ್ಲಿ 2ನೇ ಪಂಚನಾಮೆ ಮತ್ತು ಕಚ್ಚಾ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಊರಿನವನು ಎಂಬ ಕಾರಣಕ್ಕಾಗಿ ಆತನಿಗೆ ಸಹಾಯ ಮಾಡಲು ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್ ವೈ ಬಿ ವಕೀಲರಿಂದ</u>

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ